2020 ಜನವರಿ 1 ರಿಂದ 7ರ ವರೆಗೆ ರಮಾ ಶಕ್ತಿ ಮಿಷನ್‌ನ ದೇವಿ ಶ್ರೀ ರಮಾಂಬಿಕೆಯ ಸನ್ನಿಧಾನದಲ್ಲಿ ಹರಿಕಥಾ ಸಪ್ತಾಹವು ಬಹಳ ವೈಭವದಿಂದ ಜರಗಿತು. ದಿನಾಲೂ ಸಂಜೆ 6ರಿಂದ 7.30ರ ವರೆಗೆ ನೆರೆಹೊರೆಯ ಭಾವಭಜಕರು ಅಧಿಕ ಸಂಖ್ಯೆಯಲ್ಲಿ ಬಂದು ಭಾಗವಹಿಸಿದರು. ಈ ಸಲದ ಸಮಯವು ವಿಧ್ಯಾರ್ಥಿಗಳಿಗೂ ಉದ್ಯೋಗಿಗಳಿಗೂ ಅನುಕೂಲಕರವಾಗಿತ್ತು ಎಂಬುದು ಎಲ್ಲರ ಅಭಿಮತ.

ಮೊದಲನೇ ದಿನ ಜನವರಿ 1, ಬುದವಾರ ಸಾಯಂಕಾಲ 6 ಗಂಟೆಗೆ ಮೊದಲೇ ರಮಾ ಶಕ್ತಿ ಮಿಷನ್‌ನ ಕಾರ್ಯದರ್ಶಿ ಪ್ರೊ. ಎ. ಎಂ. ದೇವಯ್ಯನವರು  ಹರಿಕಥಾ ಸಪ್ತಾಹವನ್ನು ಉದ್ಘಾಟಿಸಿ ಎಲ್ಲರನ್ನೂ ಹೃತ್ಪೂರ್ವಕ ವಂದಿಸಿ ಸ್ವಾಗತಿಸಿದರು. ತರುವಾಯ ಕುಂಬಳೆಯ ಕೀರ್ತನ ಕುಟೀರದಲ್ಲಿ ಅರಳಿದ ಕುಸುಮ ಕುಮಾರಿ ಶ್ರದ್ಧಾ ಭಟ್ ನಾಯರ್ಪಳ್ಳ ಇವರು 'ವಾಮನ ಚರಿತ್ರೆ' ಎಂಬ ಅಪರೂಪದ ಕಥೆಯನ್ನು ಹೃದ್ಯಂಗಮವಾಗಿ ಪ್ರಸ್ತುತಪಡಿಸಿದರು. ಸ್ವಲ್ಪ ಕ್ಲಿಷ್ಟವೇ ಎಂದು ಭಾಸವಾಗಿದ್ದ ಪೌರಾಣಿಕ ಪ್ರಸಂಗವನ್ನು ಸರಳ ಸುಲಭ ರೀತ್ಯಾ ನಿರೂಪಿಸಿದರು. 'ವಾಮನಾವತಾರ ಹೀಗಿತ್ತಾ, ಗೊತ್ತೇ ಇರಲಿಲ್ಲಾ' ಎಂದು ಕೆಲವರು ಉದ್ಗರಿಸಿದ್ದು ಸಭೆಯಲ್ಲಿ ಕೇಳಿಬಂತು.

ಇವರಿಗೆ ಹಾರ್ಮೋನಿಯಂನಲ್ಲಿ ಡಾ. ಗುರುದಾಸ್ ಮತ್ತು ತಬಲಾದಲ್ಲಿ ಯುವ ಕಲಾವಿದ ಶ್ರೀ ಅತ್ರೇಯ ಸಹಕರಿಸಿದರು.

2ನೇ ದಿನ ಜನವರಿ 2, ಗುರುವಾರ ಶ್ರೀ ಶಮ್ಮಾ ಅಡಿಗರ ಗರಡಿಯಲ್ಲಿ ಪಳಗಿದ ಕುಮರಿ ಶಾಂಭವಿ ಕುಂಬ್ಳೆ, 'ಭಗ್ನ ಮನೋರಥ' ಎಂಬ ರಾವಣನ ವಿಫಲ ಪರಾಕ್ರಮದ ವ್ಯಥೆಯ ಕಥೆಯನ್ನು ವಿವರಿಸಿದರು. ಊರಿಗೆ ಅರಸನಾದರೂ ತಾಯಿಗೆ ಮಗ ಎಂಬಂತೆ, ತಾಯಿಗಾಗಿ ಏನನ್ನೂ ಸಾಧಿಸಬಲ್ಲೆ ಎಂಬ ದುರಹಂಕಾರದಿಂದ, ತಾನು ಸಕಲಕಲಾ ವಲ್ಲಭ, ಜಗದೇಕವೀರ, ಎಂದು ಬೀಗುತ್ತಾ ತಾಯಿ ಮಾಡುವ ಪೂಜೆಗಾಗಿ ಪರಶಿವನ ಆತ್ಮಲಿಂಗವನ್ನೇ ತರುವೆನೆಂದು ಹೋಗಿ, ಮಾಡಬಾರದ್ದನ್ನೆಲ್ಲಾ ಮಾಡಿದ್ದರಿಂದ ಆಗಬಾರದ್ದೆಲ್ಲಾ ಆಯಿತು. ಸೋತು ಸುಣ್ಣವಾದ ರಾವಣನನ್ನು ಮೈದಡವಿ ಸಂತೈಸುವ ರಾವಣನ ತಾಯಿಯ ಮಾತೃ ಹೃದಯ ಅನುಕರಣೀಯ. ಮಕ್ಕಳು ಗೆದ್ದು ಬಂದಾಗ ಮುದ್ದಾಡುವುದೇನು ಮಹಾ!! ಬಿದ್ದಾಗ ಎಬ್ಬಿಸಿ ಹುರಿದುಂಬಿಸುವವಳೇ ನಿಜವಾದ ತಾಯಿ. ಶಾಂಭವಿಯವರ ನಿರೂಪಣೆ ಮನಮುಟ್ಟುವಂತಿತ್ತು.

ಅವರಿಗೆ ಹಾರ್ಮೋನಿಯಂನಲ್ಲಿ ಶ್ರೀ ಸತ್ಯನಾರಣ ಐಲ ಮತ್ತು ತಬಲಾದಲ್ಲಿ ಶ್ರೀ ಕೆ. ಸುರೇಶ ಸಹಕರಿಸಿದರು.

3ನೇ ದಿನ ಜನವರಿ 3, ಶಾಂಭವಿಯವರ ತಂಗಿ, ಅಡಿಗರ ಗರಡಿಯಲ್ಲಿ ಗುಡುಗುವ ಸಿಡಿಲ ಮರಿ ಕುಮಾರಿ ವೈಭವಿ, 'ಯೋಗಕ್ಷೇಮಂ ವಹಾಮ್ಯಹಂ' ಎಂಬ ಕುರುಕ್ಷೇತ್ರ ಯುದ್ಧದ ಸನ್ನಿವೇಷವನ್ನು ವರ್ಣಿಸುವ ಕಥೆಯನ್ನು ನವರಸಭರಿತವಾಗಿ ಪ್ರಸ್ತುತಪಡಿಸಿದರು. ಯುದ್ಧ ಭೂಮಿಯ ವೃತ್ತಾಂತವನ್ನು ವಿವರಿಸುವಾಗ ಅವರ ಹಾವಭಾವ ಭಂಗಿ, ಭುಗಿಲೆದ್ದ ಕೋಪ, ಭಯಾನಕ ಕ್ರೌರ್ಯ,  ಶೌರ್ಯ ಇತ್ಯಾದಿಗಳೆಲ್ಲಾ ಅವರು ಪಾತ್ರದಲ್ಲಿ ಸಂಪೂರ್ಣ ತನ್ಮಯರಾಗಿದ್ದುದನ್ನು ಸೂಚಿಸುತ್ತಿತ್ತು. ಮೋಸದಿಂದ ಹಿಂದಿನಿಂದ ಬಂದು ಅಭಿಮನ್ಯುವನ್ನು ವಧಿಸುವ ಪ್ರಸಂಗವಂತೂ ಭೀಭತ್ಸರಸದ ಪ್ರತೀಕ. ಮಗನಾದ ಅಭಿಮನ್ಯುವನ್ನು ಕೊಂದಾಗ ಅರ್ಜುನನ ಪ್ರಲಾಪ ಎಂಥಹವರ ಹೃದಯವನ್ನೂ ಕದಡುವಂತಿತ್ತು.

ಮಗೂ, ಕಂದಾ ಎಂದು ಅಭಿಮನ್ಯುವಿನ ಶರೀರವಿದ್ದಲ್ಲಿ ಬಂದು ಅರ್ಜುನ ರೋದಿಸುವುದನ್ನು ವರ್ಣಿಸುವಾಗ, ನೆರೆದವರೆಲ್ಲರ ಕಣ್ಣಂಚಿನಲ್ಲಿ ನೀರೂರಿತ್ತು. ಕೆಲವರಂತೂ ಕರವಸ್ತ್ರದಿಂದ ಮುಖಮುಚ್ಚಿ ಕಣ್ಣೊರಸಿಕೊಳ್ಳುತ್ತಿದ್ದರು. ಕಲಾವಿದನು ಪಾತ್ರದಲ್ಲಿ ಐಕ್ಯತೆಯನ್ನು ಸಾಧಿಸಿದಾಗ ಮಾತ್ರವೇ ಇಂಥಹ ಭಾವಾಭಿವ್ಯಕ್ತಿ ಸಾಧ್ಯ. ವೈಭವಿಯವರು ಇದನ್ನು ಸಾಧಿಸಿದ್ದರು.

ಅವರಿಗೆ ಹಾರ್ಮೋನಿಯಂನಲ್ಲಿ ಶ್ರೀ ಸತ್ಯನಾರಣ ಐಲ ಮತ್ತು ತಬಲಾದಲ್ಲಿ ಶ್ರೀ ಕೆ. ಸುರೇಶ ಸಹಕರಿಸಿದರು.

4ನೇ ದಿನ ಜನವರಿ 4,

ಅತ್ಯಂತ ಕಿರಿಯ ಬಾಲಕಲಾವಿದೆ ಕುಮಾರಿ ಶ್ರದ್ಧಾ ಗುರುದಾಸ ಇವರಿಂದ 'ಏಕಲವ್ಯ' ಕಥೆ ಮನಮುಟ್ಟುವಂತೆ ಮೂಡಿಬಂತು. ಗುರುವಿನ ಮಹತ್ವ, ಗುರುವಿನ ಮಹಿಮೆ, ಗುರುವಿನ ಅವಶ್ಯಕತೆ ಇತ್ಯಾದಿಗಳನ್ನೆಲ್ಲಾ ವರ್ಣಿಸುವುದನ್ನು ಗಮನಿಸಿದಾಗ ವಿಷಯಗಳ ಕುರಿತು  ಇವರ ಅಪಾರ ಅರಿವು ಶ್ಲಾಘನೀಯವೇ ಎಂದೆನಿಸಿತು. ಗುರುಭಕ್ತಿಯಿಂದ ಏನನ್ನಾದರೂ ಸಾಧಿಸಬಹುದು, ಇಷ್ಟಾರ್ಥಗಳನ್ನೆಲ್ಲಾ ಪೂರೈಸಿಕೊಳ್ಳಬಹುದು ಎಂಬ ಇವರ ಸಂದೇಶ ಮನನೀಯವೇ. ವ್ಯಾಸಪೀಠದಲ್ಲಿದ್ದಾಗ ಇವರ ಗಾಂಭೀರ್ಯ, ಕಲಾತ್ಮಕ ನಿರೂಪಣೆ ಮನೋಜ್ಞವಾಗಿತ್ತು. ಎಳವೆಯಲ್ಲೇ ಅರಳಿದ ಈ ಬಾಲಪ್ರತಿಭೆಗೆ ತಂದೆಯವರ ತರಬೇತಿಯೇ ಕಾರಣ. ಇವರಿಗೆ ಉತ್ತಮ ಭವಿಷ್ಯವಿದೆ ಎಂದು ಪ್ರೇಕ್ಷಕರು ಮಾತನಾಡಿಕೊಳ್ಳುತ್ತಿದ್ದರು.

ಸ್ವತಃ ತಂದೆ ಡಾ. ಗುರುದಾಸ್ ಇವರಿಗೆ ಹಾರ್ಮೋನಿಯಂನಲ್ಲಿ ಮತ್ತು ತಬಲಾದಲ್ಲಿ ಶ್ರೀ ಅತ್ರೇಯ ಸಹಕರಿಸಿದರು.

5ನೇ ದಿನ, ಜನವರಿ

ಶಿರಸಿಯ ಕುಮಾರಿ ಶಾಂಭವಿ ಶಂಕರ ಭಟ್ ಇವರು ಭಕ್ತ ಅಂಬರೀಶನ ಸ್ವಾರಸ್ಯಕರ ಕಥೆಯನ್ನು ಸವಿವರವಾಗಿ ನಿರೂಪಿಸಿದರು. ಪರಮಾತ್ಮನು ಭಕ್ತಪರಾಧೀನ. ಪ್ರಿಯ ಭಕ್ತನಿಗಾಗಿ ದೇವರು ಏನನ್ನಾದರೂ ಮಾಡಬಹುದು ಎಂಬುದೇ ಕಥೆಯ ಸಾರ. ಎಂಥಹ ಕಠಿಣ ಪರಿಸ್ಥಿತಿಯಿಂದಲೂ ತನ್ನ ಪ್ರಿಯ ಭಕ್ತನನ್ನು ಕಾಪಾಡುತ್ತಾನೆ ಎಂಬ ಈ ಅಮೋಘ ಸತ್ಯವನ್ನು ಮನಗಾಣಿಸಿಕೊಡುವುದೇ ಈ ಕಥೆಯ ಧ್ಯೇಯ. 'ನ ಮೇ ಭಕ್ತಾಃ ಪ್ರಣಶ್ಯತಿ' ಎಂದು ಪರಮಾತ್ಮನಿತ್ತ ಅಮರ ಸಂದೇಶವೇ ಈ ಕಥೆ. ತಾನೊಬ್ಬ ಮಹಾ ತಪಸ್ವಿ ಎಂದು ಮೆರೆಯುತ್ತಿದ್ದ ದೂರ್ವಾಸ ಮಹರ್ಷಿ ಏನೋ ಒಂದು ಕ್ಷುಲ್ಲಕ ಕಾರಣಕ್ಕಾಗಿ  ಮಹಾರಾಜಾ ಅಂಬರೀಶನನ್ನು ಶಪಿಸಿ ಮುಗಿಸಲುದ್ಯುಕ್ತನಾಗುತ್ತಾನೆ. ಸತ್ಯ ಧರ್ಮಕ್ಕನುಗುಣವಾಗಿ ರಾಜ್ಯಭಾರ ಮಾಡುತ್ತಿದ್ದ ಅಂಬರೀಶನು ಪ್ರಜಾವತ್ಸಲನೂ ದೇವರ ಪ್ರಿಯ ಸದ್ಭಕ್ತನೂ ಆಗಿದ್ದನು. ದೇವರು ನನ್ನನ್ನು ಖಂಡಿತವಾಗಿಯೂ ಕಾಪಾಡುತ್ತಾನೆ ಎಂಬ ದೃಢ ವಿಶ್ವಾಸದಿಂದ ರಾಜನು, ಸ್ಥಿತಪ್ರಜ್ಞನಾಗಿದ್ದು ನಿರಂತರ ದೇವರ ಧ್ಯಾನದಲ್ಲೇ ತಲ್ಲೀನನಾಗಿದ್ದನು. ಭಕ್ತಶಿರೋಮಣಿ ರಾಜಾ ಅಂಬರೀಶನ ರಕ್ಷಣೆಗಾಗಿ ಮಹಾವಿಷ್ಣುವಿನ ಸುದರ್ಶನ ಚಕ್ರವು ದುರ್ವಾಸ ಮುನಿಯನ್ನು ಬೆನ್ನಟ್ಟುತ್ತಾ ಮೂರು ಲೋಕಗಳಲ್ಲಿಯೂ ತನ್ನನ್ನು ಕಾವರಿಲ್ಲಾ ಎಂದು ಅರಿತಾಗ ಶ್ರೀ ವಿಷ್ಣುವಿನ ಸಲಹೆಯಂತೆ ಅಂಬರೀಶನಿಗೇ ಶರಣಾಗತನಾಗಿ ಸದ್ಭಕ್ತಿಯೇ ಸರ್ವಶ್ರೇಷ್ಠ ಎಂದು ಒಪ್ಪಿಕೊಂಡನು.

ರಸಭರಿತ ಕಥೆಯನ್ನು ಎಳೆ ಎಳೆಯಾಗಿ ಮನಮುಟ್ಟುವಂತೆ ನಿರೂಪಿಸಿದ ಕುಮಾರಿ ಶಾಂಭವಿ ನಿಜವಾಗಿಯೂ ಅಭಿನಂದನೀಯರು.

ಇವರಿಗೆ ಹಾರ್ಮೋನಿಯಂನಲ್ಲಿ ಶ್ರೀ ರಮೇಶ್ ಹೆಬ್ಬಾರ್ ಮತ್ತು ತಬಲಾದಲ್ಲಿ ಶ್ರೀ ಅತ್ರೇಯ ಸಹಕರಿಸಿದರು.

6ನೇ ದಿನ ಜನವರಿ 6

ಶ್ರೀಮತಿ ಮಂಜುಳಾ ರಾವ್, ಇರಾ ಇವರು ಪಾದುಕಾ ಪ್ರದಾನ ಎಂಬ ರಾಮಾಯಣದಿಂದ ಆಯ್ದ, ಭರತನ ಅಸಾಮಾನ್ಯ ಬಂಧು ಪ್ರೇಮದ ಕಥೆಯನ್ನು ನಿರೂಪಿಸಿದರು. ತನ್ನ ಸ್ವಾರ್ಥ ಸಾಧನೆಗಾಗಿ ದೇವತಾ ಸ್ವರೂಪಿ ಪ್ರಭು ಶ್ರೀ ರಾಮಚಂದ್ರನನ್ನು ಕಾಡಿಗೆ ಕಳುಹಿಸಿ, ತಂದೆಯ ಅಕಾಲಿಕ ದುರ್ಮರಣಕ್ಕೆ ಕಾರಣಳಾದವಳು ತನ್ನ ತಾಯಿಯೇ ಆಗಿದ್ದರೂ ಅವಳ ರುಂಡವನ್ನು ಈಗಲೇ ಚಂಡಾಡುವೆನೆಂದು ಭರತನು ಖಡ್ಗವನ್ನು ಝುಳಪಿಸುತ್ತಾ ರೋಶಾವೇಷದಿಂದ ಗರ್ಜಿಸುವ ರೋಚಕ ಸನ್ನಿವೇಶವನ್ನು ಮೈನವಿರೇಳಿಸುವಂತೆ ಬಿಂಬಿಸಿದ ಪರಿ ಮಂಜುಳಾರ ಪ್ರೌಢಿಮೆಯ ದ್ಯೋತಕ. ರಾಮ ಭರತರ ಸಮಾಗಮವು ಪ್ರತಿಯೊಬ್ಬರೂ ತಮ್ಮ ಬಂಧುಬಳಗದವರೊಡನೆ ಯಾವ ರೀತಿಯಲ್ಲಿ ವ್ಯವಹರಿಸಬೇಕೆಂದು ಬೋಧಿಸುವಂತಿತ್ತು.

ಇವರಿಗೆ ಹಾರ್ಮೋನಿಯಂನಲ್ಲಿ ಶ್ರೀ ರಮೇಶ್ ಹೆಬ್ಬಾರ್ ಮತ್ತು ತಬಲಾದಲ್ಲಿ ಶ್ರೀ ಪ್ರಕಾಶ್ ಸಪ್ರೆ ಸಹಕರಿಸಿದರು.

7ನೇ ದಿನ ಜನವರಿ 7 ರಂದು ಹುಬ್ಬಳ್ಳಿಯ ಶ್ರೀಮತಿ ನಾಗರತ್ನ ವಿನಾಯಕ ಜೋಷಿಯವರು ಶ್ರೀ ಕೃಷ್ಣ ಸಂಧಾನದ ಕಥೆಯನ್ನು ಬಹಳ ಮನೋಜ್ಞವಾಗಿ ಪ್ರಸ್ತುತಪಡಿಸಿದರು.

ಸಾಮಾನ್ಯವಾಗಿ ಎಲ್ಲರೂ ತಿಳಿದಿರುವ ಕಥೆಯೇ ಆಗಿದ್ದರೂ ಕೇಳುಗರ ಚಿತ್ತವನ್ನು ಬಿಗಿಹಿಡಿತದಲ್ಲಿಟ್ಟುಕೊಂಡು ಮಂತ್ರಮುಗ್ಧರನ್ನಾಗಿಸುವುದು ನಿಜವಾಗಿಯೂ ಒಂದು ವಿಶೇಷ ಕಲೆ. ಸನ್ನಿವೇಶಗಳ ವಿವಿಧ ಮಜಲುಗಳನ್ನೂ ವಿವಿಧ ಆಯಾಮಗಳನ್ನೂ, ಎಂದೂ ಕೇಳರಿಯದ ವಿಚಾರಗಳಂತೆ ಪ್ರಸ್ತುತಪಡಿಸುವ ರೀತಿ ಅನನ್ಯ. ಅವರ ನಿರರ್ಗಳ ವಾಗ್ಝರಿ ಸಭಿಕರೆಲ್ಲರನ್ನೂ ದ್ವಾಪರಕ್ಕೆ ಕೊಂಡೊಯ್ದಿತು. ಅವರು ಅನಾಯಾಸವಾಗಿ ಉದ್ಧರಿಸುವ, ಸಂಧರ್ಭೋಚಿತ ಸಂಸ್ಕೃತ ಶ್ಲೋಕಗಳನ್ನೂ ನುಡಿಮುತ್ತುಗಳನ್ನೂ ಮತ್ತು ಉಪಕಥೆಗಳನ್ನು ಕೇಳುತ್ತಾ ನೆರೆದವರೆಲ್ಲಾ ಸ್ವಪ್ರೇರಣೆಯಿಂದಲೇ ಪ್ರಚಂಡ ಕರತಾಡನದಿಂದ ಮೆಚ್ಚುಗೆಯನ್ನು ವ್ಯಕ್ತಡಿಸುತ್ತಿದ್ದರು. ಚೀಟಿ, ಕಾಗದ ಅಥವಾ ಪುಸ್ತಕವನ್ನು ಅವಲಂಬಿಸದೆ ಒಂದಿನಿತೂ ತಡವರಿಸದೆ, ಆಷಾಡದ ಭೋರ್ಗರವ ಧಾರಾಕಾರ ಮುಸಳಧಾರೆಯಂತೆ ಸುರಿಸಿದ ಜ್ಞಾನಪ್ರವಾಹದಲ್ಲಿ ಎಲ್ಲರೂ ಕೊಚ್ಚಿಕೊಂಡು ಹೋದರು. ಯಾರಿಗೂ ಸಮಯದ ಪರಿವೆಯೇ ಇರಲಿಲ್ಲಾ.

ಕೊನೆಗೆ ಕೀರ್ತನಕಾರರೇ 'ಇನ್ನೊಂದಿಷ್ಟು ಸಮಯ ಕೊಡ್ತೀರಾ' ಎಂದು ಕೇಳಿದಾಗಲಷ್ಟೇ ಎಲ್ಲರೂ ಭಾಹ್ಯ ಪ್ರಜ್ಞೆಗೆ ಮರಳಿದರು. 'ಇನ್ನು ಸಾಕು, ನಿಮ್ಮ ಮನೆಯವರು ನಿಮಗೆ ಮುಂದೆಯೂ ಹರಿಕಥೆಗೆ ಬರಲಿಕ್ಕೆ ಅನುಮತಿ ಕೊಡಬೇಕಲ್ಲವೇ?' ಎಂದು ಅವರು ಹೇಳಿದಾಗಲಷ್ಟೇ ಎಲ್ಲರಿಗೂ ಅವರವರ ಮನೆಯ ನೆನಪಾದುದು. 'ನನ್ನ ಗಂಡ ನನಗಿಂತ ನನ್ನ ಹರಿಕಥೆಯನ್ನು ಹೆಚ್ಚು ಪ್ರೀತಿಸುತ್ತಾರೆ' ಎಂದು ಹೇಳಿ ಎಲ್ಲರನ್ನೂ ನಗೆಗಡಲಲ್ಲಿ ಮುಳುಗಿಸಿದರು.

ಸ್ವತಃ ಕೀರ್ತನಕಾರರೇ ಕೀಬೋರ್ಡ್ ನುಡಿಸಿದರು. ಶ್ರೀ ಅತ್ರೆಯ ತಬಲಾದಲ್ಲಿ ಸಹಕರಿಸಿದರು.

ಮರುದಿನ 8ನೇ ತಾರೀಕಿನಂದು, ಪ್ರತೀ ದಿನ ಹರಿಕಥೆಗೆ ನಿಯಮಬದ್ಧವಾಗಿ ಬರುತ್ತಿದ್ದ ಆಸುಪಾಸಿನ ಕೆಲವು ಮಹಿಳಾಮಣಿಗಳು ಬಂದರು. 'ಅಯ್ಯೋ, ಇವತ್ತು ಹರಿಕಥೆ ಇಲ್ಲವೇ? ಸಪ್ತಾಹ ಇಷ್ಟು ಬೇಗ ಮುಗಿದೇಹೋಯ್ತೆ?' ಎಂದು ಹೇಳುತ್ತಿರುವಾಗ ಅವರ ಕಣ್ಣಂಚಿನಲ್ಲಿ ನೀರು ಇಣುಕುತ್ತಿತ್ತು.

ಅವರನ್ನು ಸಮಾಧಾನಪಡಿಸುವುದು ಹರಸಾಹಸವಾಯಿತು. ಆದರೆ, ಇದನ್ನು ಕೇಳಿ ಆಯೋಜಕರಲ್ಲೂ, ಪ್ರಾಯೋಜಕರಲ್ಲೂ ಧನ್ಯತಾಭಾವ ಮೂಡಿತು.

@@@@@@@